# ಸ್ವರ್ಣ ಶಂಕರ ಪುರಸ್ಕಾರ



ಜನಮಾಧ್ಯಮ, ಶಿರಸಿ: ಸೋಂದಾ ಸ್ವರ್ಣವಲ್ಲೀಯಲ್ಲಿ ಜ.21ರ ತನಕ ನಡೆಯಲಿರುವ ಶ್ರೀ ಶಾಂಕರ ಸರಸ್ವತೀ ಎಂಬ ಕಾರ್ಯಕ್ರಮ ಶ್ರೀಶಂಕರಭಾಷ್ಯ ಹಾಗೂ ಶ್ರೀಜೈಮಿನಿಯ ಸೂತ್ರ ಪಾರಾಯಣ ಸತ್ರ, ಶಾಸ್ತ್ರ ಚಿಂತನ ಸತ್ರ, ಮತ್ತು ಸ್ವರ್ಣ ಶಂಕರ ಪುರಸ್ಕಾರ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಸೋಂದಾ ಸ್ವರ್ಣವಲ್ಲೀ ಮಠಾಧೀಶ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮೀಜಿಗಳು ಸಮಾರಂಭಕ್ಕೆ ಚಾಲನೆ ನೀಡಿ ಆಶೀರ್ವಚನ ನುಡಿದರು. ಪ್ರತಿ ದಿನ ಬೆಳಿಗ್ಗೆ ಪಾರಾಯಣ ಹಾಗೂ ಮಧ್ಯಾಹ್ನ ಶಾಸ್ತ್ರ ಚಿಂತನ ಗೋಷ್ಠಿ ನಡೆಯಲಿದೆ. 21ರಂದು ಮಧ್ಯಾಹ್ನ ಸ್ವರ್ಣ ಶಂಕರ ಪುರಸ್ಕಾರ ನಡೆಯಲಿದೆ.